**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ5[1]ಸಿಬ್ಬಂದಿ ಸೇವಾ ವಿವರ:20:2012-13 ದಿನಾಂಕ:20-01-2015

# ಸು ತ್ತೋ ಲೆ :

**ವಿಷಯ**: ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಶಾಲೆ : ಕಛೇರಿ : ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ ವೃಂದದ ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ' ವರ್ಗದ ಅಧಿಕಾರಿ : ನೌಕರರ ಸೇವಾ ವಿವರಗಳ ಬಗ್ಗೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಶಾಲೆ : ಕಛೇರಿ : ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ ವೃಂದದ ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ' ವರ್ಗದ ಅಧಿಕಾರಿ : ನೌಕರರ ಸೇವಾ ವಿವರಗಳು ಈ ಕಛೇರಿಗೆ ಜರೂರಾಗಿ ಬೇಕಾಗಿರುತ್ತದೆ.

ಆದುದರಿಂದ ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು/ ಡಯಟ್ ಪ್ರಾಂಶುಪಾಲರುಗಳು/ ವಿಭಾಗೀಯ ಸಹ ನಿರ್ದೇಶಕರುಗಳು/ ಸಿ.ಟಿ.ಇ ಪ್ರಾಂಶುಪಾಲರುಗಳು/ ನಿರ್ದೇಶಕರುಗಳು ಮತ್ತು ಅಪರ ಆಯುಕ್ತರು, ಅವರವರ ಆಡಳಿತ ವ್ಯಾಪ್ತಿಗೆ ಒಳಪಡುವ [ಈ ಕೆಳಗೆ ನಮೂದಿಸಿರುವಂತೆ] ***"ಅಧಿಕಾರಿ/ನೌಕರರ ಸೇವಾ ವಿವರಗಳನ್ನು"*** ಮತ್ತು ***"ಖಾಲಿ ಹುದ್ದೆಗಳ"*** ಮಾಹಿತಿಯನ್ನು ದಿನಾಂಕ:31.03.2015ರಲ್ಲಿದ್ದಂತೆ ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆ-I , II , III ಮತ್ತು IVರಲ್ಲಿ ತಿಳಿಸಿರುವಂತೆ ಕಳುಹಿಸಲು ತಿಳಿಸಿದೆ.

## *I ಜಿಲ್ಲಾ ಉಪ ನಿರ್ದೇಶಕರುಗಳು ಕ್ರೋಢೀಕರಿಸಿ ಕಳುಹಿಸಬೇಕಾದ ಅಧಿಕಾರಿ/ ನೌಕರರ ವಿವರಗಳು:*

*01.* ಉಪ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಾಂಕಿತ ಸಹಾಯಕರು/ ಮ್ಯಾನೇಜರ್/ಅಧೀಕ್ಷಕರು/ಪ್ರಥಮ ದರ್ಜೆ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು/ ಸಿ.ಸಿ.ಟಿ /ಬೆರಳಚ್ಚುಗಾರರು/ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು. **ಆಡಳಿತ ವ್ಯಾಪ್ತಿಯ ಕಛೇರಿಗಳಿಂದ ಬೇರೆಡೆ ನಿಯೋಜನೆಗೊಂಡಿರುವ ನೌಕರರ ಮಾಹಿತಿಯನ್ನು ಮತ್ತು ಷರಾ ಕಾಲಂನಲ್ಲಿ ಯಾವ ಕಛೇರಿಗೆ ನಿಯೋಜಿತರಾಗಿದ್ದಾರೆ ಎಂಬ ವಿವರವನ್ನು ತಪ್ಪದೇ ನೀಡುವುದು.**

*02.* ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮ್ಯಾನೇಜರ್/ಅಧೀಕ್ಷಕರು/ ಪ್ರಥಮ ದರ್ಜೆ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು/ಸಿ.ಸಿ.ಟಿ/ಬೆರಳಚ್ಚುಗಾರರು/ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

*03.* ಸರ್ಕಾರಿ ಪ್ರೌಢಶಾಲೆ/ಸರ್ಕಾರಿ ವಸತಿ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ [ಪದವಿ ಪೂರ್ವ ಶಿಕ್ಷಣ ಇಲಾಖೆಯ ನೌಕರರನ್ನು ಹೊರತುಪಡಿಸಿ ಪ್ರಥಮ ದರ್ಜೆಸಹಾಯಕರು/ದ್ವಿತೀಯ ದರ್ಜೆ ಸಹಾಯಕರು/ಸಿ.ಸಿ.ಟಿ/ಬೆರಳಚ್ಚುಗಾರರು/ ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

*04.* ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಲ್ಲಿನ ಎಸ್.ಎಸ್.ಎ ಕಾರ್ಯಕ್ರಮದಡಿಯಲ್ಲಿ ಪೂರ್ಣಕಾಲಿಕವಾಗಿ [ವೇತನ ಸಹಿತ] ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು /ದ್ವಿತೀಯ ದರ್ಜೆ ಸಹಾಯಕರು/ಸಿ.ಸಿ.ಟಿ/ಬೆರಳಚ್ಚುಗಾರರು/ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

*05.* ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು /ದ್ವಿತೀಯ ದರ್ಜೆ ಸಹಾಯಕರು/ಸಿ.ಸಿ.ಟಿ/ಬೆರಳಚ್ಚುಗಾರರು/ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

## *II ಡಯಟ್ ಪ್ರಾಂಶುಪಾಲರು ಕಳುಹಿಸಬೇಕಾದ ಅಧಿಕಾರಿ/ನೌಕರರ ಸೇವಾ ವಿವರಗಳು:*

*01.* ಡಯಟ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀಕ್ಷಕರು / ಪ್ರಥಮ ದರ್ಜೆ ಸಹಾಯಕರು / ದ್ವಿತೀಯ ದರ್ಜೆ ಸಹಾಯಕರು / ಸಿ.ಸಿ.ಟಿ / ಬೆರಳಚ್ಚುಗಾರರು / ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

*02.* ಡಯಟ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಟಿ.ಟಿ.ಐ ಗಳಲ್ಲಿನ ಪ್ರಥಮ ದರ್ಜೆ ಸಹಾಯಕರು / ದ್ವಿತೀಯ ದರ್ಜೆ ಸಹಾಯಕರು / ಸಿ.ಸಿ.ಟಿ / ಬೆರಳಚ್ಚುಗಾರರು / ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

## *III ವಿಭಾಗೀಯ ಜಂಟಿ ನಿರ್ದೇಶಕರುಗಳು ಕಳುಹಿಸಬೇಕಾದ ಅಧಿಕಾರಿ/ನೌಕರರ ಸೇವಾ ವಿವರಗಳು:*

01. ಜಂಟಿ ನಿರ್ದೇಶಕರುಗಳ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಸಹಾಯಕ ನಿರ್ದೇಶಕರು / ಪತ್ರಾಂಕಿತ ಸಹಾಯಕರು / ಸಹಾಯಕ ನಿರ್ದೇಶಕರು [ವಾಣಿಜ್ಯ]

ಮ್ಯಾನೇಜರ್/ಅಧೀಕ್ಷಕರು/ಪ್ರಥಮ ದರ್ಜೆ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು / ಸಿ.ಸಿ.ಟಿ/ ಬೆರಳಚ್ಚುಗಾರರು/ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

***IV ಸರ್ಕಾರಿ ಶಿಕ್ಷಣ ಮಹಾ ವಿದ್ಯಾಲಯಗಳ ಪ್ರಾಚಾರ್ಯರು, ಕಳುಹಿಸಬೇಕಾದ ಅಧಿಕಾರಿ / ನೌಕರರ ಸೇವಾ ವಿವರಗಳು:***

01. ಸರ್ಕಾರಿ ಶಿಕ್ಷಣ ಮಹಾ ವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀಕ್ಷಕರು/ಪ್ರಥಮ ದರ್ಜೆ ಸಹಾಯಕರು / ದ್ವಿತೀಯ ದರ್ಜೆ ಸಹಾಯಕರು / ಸಿ.ಸಿ.ಟಿ / ಬೆರಳಚ್ಚುಗಾರರು / ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

***V ಅಪರ ಆಯುಕ್ತರು, ಧಾರವಾಡ ಮತ್ತು ಗುಲ್ಬರ್ಗಾ/ನಿರ್ದೇಶಕರು, ಡಿ.ಎಸ್.ಇ.ಆರ್.ಟಿ/ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಉರ್ದು ಮತ್ತು ಅಲ್ಪಸಂಖ್ಯಾತ ಭಾಷಾ ಶಾಲೆಗಳು/ ನಿರ್ದೇಶಕರು, ಎಸ್.ಎಸ್.ಎ, ಬೆಂಗಳೂರು/ನಿರ್ದೇಶಕರು, ವೃತ್ತಿ ಶಿಕ್ಷಣ/ಲೋಕ ಶಿಕ್ಷಣ/ಉಪನಿರ್ದೇಶಕರು ಟಿ ಬಿ ಎಫ್/ಮುಖ್ಯ ವೈದ್ಯಕೀಯ ಪರಿವೀಕ್ಷಕರು – ಇವರು ಕಳುಹಿಸಬೇಕಾದ ಮಾಹಿತಿ:***

ಆಯಾ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನಿರ್ದೇಶಕರು [ಬೋಧಕೇತರ], ಹಿರಿಯ ಸಹಾಯಕ ನಿರ್ದೇಶಕರು / ಸಹಾಯಕ ನಿರ್ದೇಶಕರು [ವಾಣಿಜ್ಯ], ಪತ್ರಾಂಕಿತ ಸಹಾಯಕರು/ಮ್ಯಾನೇಜರ್ [ಸಹಾಯಕ ನಿರ್ದೇಶಕರು] / ಅಧೀಕ್ಷಕರು / ಪ್ರಥಮ ದರ್ಜೆ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು/ ಸಿ.ಸಿ.ಟಿ/ಬೆರಳಚ್ಚುಗಾರರು/ವಾಹನ ಚಾಲಕರು ಮತ್ತು "ಡಿ" ದರ್ಜೆ ನೌಕರರ ವಿವರಗಳು.

- ***<u>ವಿಶೇಷ ಸೂಚನೆ:–</u>*** ಮೇಲ್ಕಂಡ ಅಧಿಕಾರಿ/ನೌಕರರ ಮಾಹಿತಿಯನ್ನು ***<u>ಹುದ್ದೆವಾರು ಕ್ರೋಢೀಕರಿಸಿ</u>*** ಕಳುಹಿಸತಕ್ಕದ್ದು. ಜೊತೆಗೆ ***<u>ಎಂ.ಎಸ್.ಎಕ್ಸೆಲ್‌ನ ನುಡಿ ಅಕ್ಷರ [ಫಾಂಟ್]ನಲ್ಲಿಯೇ [ದಿನಾಂಕಗಳನ್ನು DD/MM/YY ರೂಪದಲ್ಲಿ] ಸಿದ್ಧಪಡಿಸಿ [ಗಣಕೀಕರಿಸಿ] ಸಿ.ಡಿ ರೂಪದಲ್ಲಿ ನೀಡಲು ತಿಳಿಸಿದೆ [ಹಾರ್ಡ್ ಮತ್ತು ಸಾಫ್ಟ್ ಕಾಪಿಗಳೆರಡನ್ನೂ ಸಲ್ಲಿಸಬೇಕು] ಈ ರೀತಿ ಸಲ್ಲಿಸದ ಮಾಹಿತಿಗಳನ್ನು ತಿರಸ್ಕರಿಸಲಾಗುವುದು.</u>***
- ***<u>ಲಗತ್ತಿಸಿರುವ ನಮೂನೆಗಳಲ್ಲಿ ಮಾಹಿತಿ ಕಳಿಸುವಾಗ ಯಾವುದೇ ಕಾರಣಕ್ಕೂ ತಪ್ಪಾಗದಂತೆ ಜಾಗ್ರತೆ ವಹಿಸಲು ತಿಳಿಸಿದೆ.</u>***
- ಕಳೆದ ಸಾಲಿನಲ್ಲಿ ***ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯ ವ್ಯಾಪ್ತಿಯಲ್ಲಿನ ಕೆಲವು ಜಿಲ್ಲಾ ಉಪನಿರ್ದೇಶಕರು ಮತ್ತು ಡಯಟ್ ಪ್ರಾಂಶುಪಾಲರು ಸದರಿ ಮಾಹಿತಿಗಳನ್ನು ಸಲ್ಲಿಸಿರುವುದಿಲ್ಲ***. ಇದರಿಂದಾಗಿ ಕೆಲವೊಂದು ಸಂದರ್ಭದಲ್ಲಿ ನೌಕರರ ಮಾಹಿತಿ ಇಲ್ಲದೆ ಇಲಾಖೆಯು ಮುಜುಗರದ ಪ್ರಸಂಗವನ್ನು ಎದುರಿಸಬೇಕಾದ ಸಂದರ್ಭ ಒದಗಿ ಬಂದಿದ್ದನ್ನು ಮಾನ್ಯ ಆಯುಕ್ತರು ತೀವ್ರವಾಗಿ ಗಮನಿಸಿರುತ್ತಾರೆ. ಆದ್ದರಿಂದ ನಿಗಧಿತ ಅವಧಿಯಲ್ಲಿ ಮಾಹಿತಿ ಸಲ್ಲಿಸಲು ತಿಳಿಸಿದೆ.
- ನೀವು ಕಳುಹಿಸುವ ಮಾಹಿತಿಗಳ ಆಧಾರದ ಮೇಲೆಯೇ ವರ್ಗಾವಣೆ ಮತ್ತಿತರೆ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವ ಸಂಭವವಿರುವುದರಿಂದ, ಕರಾರುವಕ್ಕಾದ ಮಾಹಿತಿಯನ್ನು ಶ್ರೀ ಎನ್.ಡಿ.ಅನಂತರಾಜು, ಸಹಾಯಕ ನಿರ್ದೇಶಕರು [ಆಡಳಿತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001, ಇವರ ಹೆಸರಿಗೆ, ದಿನಾಂಕ:25.02.2015ರ ಒಳಗೆ ಕಳುಹಿಸಲು ಕೋರಿದೆ.

*[ಎನ್.ಚಂದ್ರಶೇಖರ್]*
ಜಂಟಿ ಆಯುಕ್ತರು[ಆಡಳಿತ]

***ಇವರಿಗೆ:***

*01.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ.
*02.* ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., / ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ / ಲೋಕ ಶಿಕ್ಷಣ ನಿರ್ದೇಶನಾಲಯ / ವೃತ್ತಿ ಶಿಕ್ಷಣ ನಿರ್ದೇಶನಾಲಯ / ಉರ್ದು ಮತ್ತು ಇತರೆ ಭಾಷಾ ಶಾಲೆಗಳು, ಬೆಂಗಳೂರು.
*03.* ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ., ಬೆಂಗಳೂರು.
*04.* ರಾಜ್ಯದ ಎಲ್ಲಾ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
*05.* ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
*06.* ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ.
*07.* ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು, ಸಾರ್ವಜನಿಕ ಶಿಕ್ಷಣ ಇಲಾಖೆ.
*08.* ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು, ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು,
*09.* ಮುಖ್ಯ ವೈದ್ಯಕೀಯ ಪರಿವೀಕ್ಷಕರು, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು.
*10.* ಕಛೇರಿ ಪ್ರತಿ.

E:\gsrrShedule O Est.doc

## ನಮೂನೆ–I

**ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ ವೃಂದದ ಗ್ರೂಪ್ ":ಎ" 'ಬಿ','ಸಿ' ಮತ್ತು 'ಡಿ' ವರ್ಗದ ಅಧಿಕಾರಿ : ನೌಕರರ ಸೇವಾ ವಿವರ.**

| ಕ್ರ. ಸಂ | ಅಧಿಕಾರಿಗಳ / ನೌಕರರ ಹೆಸರು, ಹುದ್ದೆಯ ಹೆಸರು ಮತ್ತು ಪೂರ್ಣ ವಿಳಾಸ [ತಾಲ್ಲೂಕು ಮತ್ತು ಜಿಲ್ಲೆಯ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು. | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಹುದ್ದೆಗೆ ನೇಮಕಾತಿ/ಬಡ್ತಿ ಹೊಂದಿದ ದಿನಾಂಕ | ಹಾಲಿ ಕಛೇರಿಯಲ್ಲಿ ಯಾವ ದಿನಾಂಕದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ | ಹಾಲಿ ಕಛೇರಿಯಲ್ಲಿ ಈ ಹಿಂದೆ ಸೇವೆ ಸಲ್ಲಿಸಿದ್ದಲ್ಲಿ ಅದರ ಮಾಹಿತಿ | ಸ್ವಂತ ಸ್ಥಳ / ತಾಲ್ಲೂಕು / ಜಿಲ್ಲೆ | ಪರಿಶಿಷ್ಠ ಜಾತಿ / ಪಂಗಡ / ಇತರೆ ವರ್ಗದ ನೌಕರರೇ | ಅಂಗವಿಕಲರೇ/ ಪತಿ ಪತ್ನಿ ರಾಜ್ಯ ಸರ್ಕಾರಿ ನೌಕರರೇ / ವೈದ್ಯಕೀಯ ಕಾರಣವಿದೆಯೆ? | ಷರಾ |
|---|---|---|---|---|---|---|---|---|---|---|
| 01 | 02 | 03 | 04 | 05 | 06 | 07 | 08 | 09 | 10 | 11 |
| | | | | | | | | | | |

**ವಿಶೇಷ ಸೂಚನೆ:–**

ಅಧಿಕಾರಿ / ನೌಕರರು ಬಡ್ತಿ ಹೊಂದಿ ಅದೇ ಕಛೇರಿಯಲ್ಲಿ ಮುಂದುವರೆಯುತ್ತಿದ್ದಲ್ಲಿ ಪ್ರಥಮವಾಗಿ ಹಾಲಿ ಕಛೇರಿಗೆ ಕರ್ತವ್ಯಕ್ಕೆ ಹಾಜರಾದ ಹುದ್ದೆ ಮತ್ತು ದಿನಾಂಕವನ್ನು ಸಹ ತಪ್ಪದೇ ದಾಖಲಿಸತಕ್ಕದ್ದು.

*ವರದಿ ಮಾಡುವ ಅಧಿಕಾರಿಗಳ ಸಹಿ.*

## ನಮೂನೆ-II

**ಬೋಧಕೇತರ ವೃಂದದ ಗ್ರೂಪ್"ಎ" 'ಬಿ','ಸಿ' ಮತ್ತು 'ಡಿ' ವರ್ಗದ ಅಧಿಕಾರಿ : ನೌಕರರ ಖಾಲಿ ಹುದ್ದೆಗಳ ವಿವರ.**

| ಕ್ರ. ಸಂ | ಖಾಲಿ ಇರುವ ಹುದ್ದೆಗಳ ಪದನಾಮ | ಹುದ್ದೆ ಖಾಲಿ ಇರುವ ಶಾಲಾ / ಕಾಲೇಜು / ಸಂಸ್ಥೆಯ ಪೂರ್ಣ ವಿಳಾಸ [ತಾಲ್ಲೂಕು ಮತ್ತು ಜಿಲ್ಲೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸ ಬೇಕು] | ಯಾವ ದಿನಾಂಕದಿಂದ ಹುದ್ದೆ ಖಾಲಿ ಇದೆ. | ಖಾಲಿ ಹುದ್ದೆ ಉದ್ಭವಿಸಲು ಕಾರಣ | ಷರಾ |
|---|---|---|---|---|---|
| 01 | 02 | 03 | 04 | 05 | 06 |
| | | | | | |

***ಸೂಚನೆ:*** ದಿನಾಂಕ:31.03.2015ರವರೆಗೆ ಉದ್ಭವಿಸುವ ಖಾಲಿ ಹುದ್ದೆಗಳನ್ನು ಸೇರ್ಪಡೆ ಮಾಡತಕ್ಕದ್ದು

*ವರದಿ ಮಾಡುವ ಅಧಿಕಾರಿಗಳ ಸಹಿ.*

# ನಮೂನೆ-III

**ಗ್ರೂಪ್-ಬಿ ಅಧಿಕಾರಿಗಳು 4 ವರ್ಷ, "ಸಿ" ವರ್ಗದ ನೌಕರರು 5 ವರ್ಷ, 'ಡಿ' ವರ್ಗದ ನೌಕರರು 7 ವರ್ಷಗಳಿಗೂ ಹೆಚ್ಚುಕಾಲ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಟ್ಟಿ.**

**[ದಿನಾಂಕ:31-3-2015ರಲ್ಲಿರುವಂತೆ]**

| ಕ್ರ. ಸಂ | ಅಧಿಕಾರಿಗಳ / ನೌಕರರ ಹೆಸರು, ಹುದ್ದೆಯ ಹೆಸರು ಮತ್ತು ಪೂರ್ಣ ವಿಳಾಸ [ತಾಲ್ಲೂಕು ಮತ್ತು ಜಿಲ್ಲೆಯ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು. | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಹುದ್ದೆಗೆ ನೇಮಕಾತಿ/ಬಡ್ತಿ ಹೊಂದಿದ ದಿನಾಂಕ | ಹಾಲಿ ಕಛೇರಿಯಲ್ಲಿ ಯಾವ ದಿನಾಂಕದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ | ಹಾಲಿ ಕಛೇರಿಯಲ್ಲಿ ಈ ಹಿಂದೆ ಸೇವೆ ಸಲ್ಲಿಸಿದ್ದಲ್ಲಿ ಅದರ ಮಾಹಿತಿ | ಸ್ವಂತ ಸ್ಥಳ / ತಾಲ್ಲೂಕು / ಜಿಲ್ಲೆ | ಪರಿಶಿಷ್ಟ ಜಾತಿ / ಪಂಗಡ / ಇತರೆ ವರ್ಗದ ನೌಕರರೇ | ಅಂಗವಿಕಲರೇ/ ಪತಿ ಪತ್ನಿ ರಾಜ್ಯ ಸರ್ಕಾರಿ ನೌಕರರೇ / ವೈದ್ಯಕೀಯ ಕಾರಣವಿದೆಯೆ? | ಷರಾ |
|---|---|---|---|---|---|---|---|---|---|---|
| 01 | 02 | 03 | 04 | 05 | 06 | 07 | 08 | 09 | 10 | 11 |
| | | | | | | | | | | |

***ವಿಶೇಷ ಸೂಚನೆ:-***

ಅಧಿಕಾರಿ / ನೌಕರರು ಬಡ್ತಿ ಹೊಂದಿ ಅದೇ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಪ್ರಥಮವಾಗಿ ಹಾಲಿ ಕಛೇರಿಗೆ ಕರ್ತವ್ಯಕ್ಕೆ ಹಾಜರಾದ ಹುದ್ದೆ ಮತ್ತು ದಿನಾಂಕವನ್ನು ಸಹ ತಪ್ಪದೇ ದಾಖಲಿಸತಕ್ಕದ್ದು.

*ವರದಿ ಮಾಡುವ ಅಧಿಕಾರಿಗಳ ಸಹಿ.*

## ನಮೂನೆ-IV
## ಘೋಷ್ವಾರೆ

| ಕ್ರ.ಸಂ | ಹುದ್ದೆಗಳ ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 01. | | | | | |
| 02. | | | | | |
| 03. | | | | | |

*ವರದಿ ಮಾಡುವ ಅಧಿಕಾರಿಗಳ ಸಹಿ.*